ಒ ಎಸ್ 93/2021 ಪಿ.ಡಬ್ಲ್ಯೂ 1

ಇಂದು ದಿ: 29.08.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಎಂ ಕೆ ಬಿ ವಕೀಲರಿಂದ:

ಈ ದಾವೆಯ ಸಂಪೂರ್ಣ ಮಾಹಿತಿ ನನಗೆ ಗೊತ್ತು. ಅದೇ ರೀತಿ ವಾದಿ ಮತ್ತು ಪ್ರತಿವಾದಿಗಳ ಕುಟುಂಬದ ಸಂಪೂರ್ಣ ವಿವರ ನನಗೆ ಗೊತ್ತು. ನಂದಿಗುಂದ ಮಾದಪ್ಪ ನನ್ನ ತಾತನ ತಂದೆ. ನಂದಿಗುಂದ ಮಾದಪ್ಪನ ಹೆಂಡತಿ ಹೆಸರು ನನಗೆ ಗೊತ್ತಿಲ್ಲ, ಅವರಿಗೆ ಬಸಪ್ಪ, ಮಲ್ಲಪ್ಪ ಮತ್ತು ಮಹದೇವಪ್ಪ ಎಂಬ ಮಕ್ಕಳು ಎಂದರೆ ಸರಿ. ಬಸಪ್ಪನಿಗೆ ನಾಗರಾಜು ಮತ್ತು ಪಾರ್ವತಮ್ಮ ಎಂಬ ಇಬ್ಬರು ಮಕ್ಕಳು ಎಂದರೆ ಸರಿ. ಮಲ್ಲಪ್ಪ ಮತ್ತು ಮಹದೇವಪ್ಪ ಮೃತಪಟ್ಟಿರುತ್ತಾರೆ.

ದಾವಾ ಸ್ವತ್ತುಗಳು ಮಾದಪ್ಪನ ಮಕ್ಕಳ ನಡುವೆ ಯಾವಾಗ ವಿಭಾಗ ಆಯಿತು ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ಆ ರೀತಿ ದಾಖಲೆ ಕೊಡಲು ನನಗೆ ತೊಂದರೆ ಇರಲಿಲ್ಲ. ದಾವಾ ಆಸ್ತಿಗಳು ನಂದಿಗುಂದ ಮಾದಪ್ಪನ ಮಕ್ಕಳು ನಡುವೆ 30 ವರ್ಷಗಳ ಹಿಂದೆ ವಿಭಾಗ ಆಯಿತು ಎಂದು ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ದಾವಾ ಆಸ್ತಿಗಳು ವಿಭಾಗ ಆಗಿಲ್ಲ ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸರಿಯಲ್ಲ. ವಿಭಾಗ ಆಗದ ಕಾರಣ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಕೆಲವೊಂದು ಆಸ್ತಿಗಳನ್ನು ಬಿಟ್ಟು ನಾನು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ನಂದಿಗುಂದ ಮಾಡದಪ್ಪನ ಮಕ್ಕಳ ನಡುವೆ ವಿಭಾಗ ಆಗಿಲ್ಲ ಮತ್ತು ಎಲ್ಲಾ ಆಸ್ತಿಗಳನ್ನು ನಾನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ನನಗೆ ದಾವೆ ವಿಚಾರಗಳು ತಿಳಿದಿಲ್ಲ ಮತ್ತು ನನ್ನ ತಾಯಿ ಮೃತರಾದ ನಂತರ ದಾವೆ ಸಲ್ಲಿಸಿದ್ದೇನೆ ಎಂದರೆ ದಾವೆ ಸಲ್ಲಿಸಿದ ನಂತರ ನನ್ನ ತಾಯಿ ಮೃತರಾಗಿರುತ್ತಾರೆ ಎನ್ನುತ್ತಾರೆ. ದಾವಾ ಆಸ್ತಿಗಳು ನಂದಿಗುಂದ ಮಾಡದಪ್ಪನ ಮಕ್ಕಳ ನಡುವೆ ವಿಭಾಗ ಆಗಿಲ್ಲ ಮತ್ತು ಅವರು ಒಟ್ಟು ಕುಟುಂಬದ ಸದಸ್ಯರಾಗಿ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ.

ಬಸಪ್ಪನಿಗೆ ಯಾವ ವರ್ಷದಲ್ಲಿ ಆಸ್ತಿ ವಿಭಾಗದಲ್ಲಿ ಬಂತು ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳ ಬಗ್ಗೆ ನನಗೆ ಮಾಹಿತಿ ಇಲ್ಲದಿದ್ದರೂ ಸತ್ಯಕ್ಕೆ ದೂರವಾದ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮಹದೇವಮ್ಮನಿಗೆ 85 ವರ್ಷ, 2 ನೇ ಪ್ರತಿವಾದಿಗೆ 65 ವರ್ಷ, ನನ್ನ ತಾಯಿ ಪಾರ್ವತಮ್ಮನಿಗೆ 55 ವರ್ಷ ಆಗಿದೆ. 2ನೇ ಪ್ರತಿವಾದಿಗೆ 55 ವರ್ಷ ಎಂದು ನಮೂದಿಸಿದ್ದೇನೆ ಎಂದರೆ ಅವರ ಜನ್ಮ ದಿನಾಂಕ ಗೊತ್ತಿಲ್ಲದ ಕಾರಣ ನಮೂದಿಸಿದ್ದೇನೆ ಎನ್ನುತ್ತಾರೆ. ನನ್ನ ತಾಯಿಗೆ 45 ವರ್ಷಗಳ ಹಿಂದೆ ನಾಗರಾಜು ಜೊತೆ ಮದುವೆಯಾಗಿತ್ತು. ಮದುವೆಯಾದ ಸಂಧರ್ಭದಲ್ಲಿ ಸಂಪ್ರದಾಯದ ಪ್ರಕಾರ ಏನೆಲ್ಲ ಆಸ್ತಿಗಳನ್ನು

ಪಡೆದುಕೊಳ್ಳಬೇಕೊ ಅದನ್ನೆಲ್ಲಾ ನನ್ನ ತಾಯಿ ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ನನ್ನ ತಾಯಿಗೆ ಮದುವೆ ಸಮಯದಲ್ಲಿ ನನ್ನ ತಾಯಿಗೆ 70 ಗ್ರಾಂ ಚಿನ್ನ ಮತ್ತು ನಗದು ನೀಡಿದ್ದಾರೆ ಎಂದರೆ ಸರಿಯಲ್ಲ, ಆಸ್ತಿಯಲ್ಲಿ ನನಗೆ ಹಕ್ಕು ಇಲ್ಲ ಎಂದು ನನ್ನ ತಾಯಿ ಅವರ ಅಣ್ಣನಿಗೆ ಮೌಖಿಕವಾಗಿ ತಿಳಿಸಿದ್ದಾರೆ ಎಂದರೆ ಸರಿಯಲ್ಲ. ನನ್ನ ತಾಯಿ ಮೃತರಾಗಿ 25 ವರ್ಷ ಆಗಿದೆ. ನನ್ನ ತಾಯಿ ಮೃತರಾದ ನಂತರ ದಾವಾ ಆಸ್ತಿಯ ದಾಖಲೆಯನ್ನು ನಾನು ನೋಡಿಲ್ಲ. ಒಂದು ವೇಳೆ ನನಗೆ ದಾವಾ ಆಸ್ತಿಯಲ್ಲಿ ಹಕ್ಕು ಇದಿದ್ದರೆ 25 ವರ್ಷದ ಹಿಂದೆ ದಾವೆ ಸಲ್ಲಿಸುತ್ತಿದ್ದೆ, ನನ್ನ ತಾಯಿ ಮದುವೆ ಸಮಯದಲ್ಲಿ ದಾವಾ ಆಸ್ತಿಯನ್ನು ಪಡೆದುಕೊಂಡ ಕಾರಣ ದಾವೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ಮೃತರಾದಾಗ ವಾದಿಗಳಾದ ನಾವೆಲ್ಲರೂ ಅಪ್ರಾಪ್ತ ಮಕ್ಕಳು ಎಂದರೆ ಸರಿ. ಆ ಕಾರಣ ನನ್ನ ತಾಯಿಯ ಬಗ್ಗೆ ಸಂಪೂರ್ಣ ಮಾಹಿತಿ ಗೊತ್ತಿಲ್ಲ ಎಂದರೆ ಸರಿ. ನನ್ನ ತಾಯಿಯ ಕಾರ್ಯವನ್ನು 1 ಮತ್ತು 2ನೇ ಪ್ರತಿವಾದಿಗಳು ಸೇರಿ ಮಾಡಿದ್ದಾರೆ ಎಂದರೆ ಸುಳ್ಳು. ನನ್ನ ತಾಯಿ ಮೃತರಾದ ಸಮಯದಲ್ಲಿ ನಾವು ಅಪ್ರಾಪ್ತರಾದ ಕಾರಣ ನಮ್ಮ ತಾತನ ಮನೆಯಲ್ಲಿದ್ದೆವು ಎಂದರೆ ಸರಿಯಲ್ಲ. ಆ ಕಾರಣ ನಮ್ಮ ತಾತನ ಆಸ್ತಿಯನ್ನು ಬಿಟ್ಟು ದಾವಾ ಆಸ್ತಿಯಲ್ಲಿ ಮಾತ್ರ ಪರಿಹಾರ ಕೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಾಯಿ ಮೃತರಾದ ನಂತರ ನಾಗರಾಜು ಮನೆಯನ್ನು ಬಿಟ್ಟುಕೊಟ್ಟಿದ್ದು, ನಾವು ಆ ಮನೆಯಲ್ಲಿ ವಾಸವಿದ್ದೇವೆ. ಆ ಕಾರಣ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ವಾಸದ ಮನೆ ಇದೆ. ಅವರ ಮನೆಯನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಎಲ್ಲಾ ಒಟ್ಟು ಕುಟುಂಬದ ಆಸ್ತಿಯನ್ನು ದಾವೆಯಲ್ಲಿ ಸೇರಿಸದ ಕಾರಣ ದಾವೆಯಲ್ಲಿ ವಿಭಾಗ ಕೇಳಲು ಹಕ್ಕು ಇಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ಮೃತರಾಗಿ 30 ವರ್ಷ ಮೇಲ್ಪಟ್ಟಿದ್ದರೂ ಸಹ 25 ವರ್ಷ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿಯೇ ನನ್ನ ತಾಯಿಯ ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ದಾವೆಯಲ್ಲಿ ಹಾಜರುಪಡಿಸಿರುವ ಆರ್ ಟಿ ಸಿ ಗಳು ನನ್ನ ತಾತನ ತಾತನ ಆರ್ ಟಿ ಸಿ ಗಳು ಎಂದರೆ ಸರಿ. ವಿಭಾಗ ಪತ್ರ ಸಲ್ಲಿಸದ ಕಾರಣ ದಾವೆಯಲ್ಲಿ ವಿಭಾಗ ಕೇಳಲು ಹಕ್ಕು ಇಲ್ಲ ಎಂದರೆ ಸರಿಯಲ್ಲ. ಸತ್ಯಾಂಶ ಹೊರಬರುತ್ತದೆ ಎಂಬ ಕಾರಣಕ್ಕೆ ನನ್ನ ತಾಯಿಯ ಮರಣ ಪ್ರಮಾಣ ಪತ್ರ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

sd/-

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ, ನಂಜನಗೂಡು.